ಪಡುಬಿದ್ರಿ : ಶ್ರೀಮಹಾಲಿಂಗೇಶ್ವರ

ಶ್ರೀಮಹಾಗಣಪತಿ ದೇವಸ್ಥಾನ.

ಶಿಲ್ಪಗಳ ಬಿನ್ನಾಣದಲ್ಲಿ "ಮೌನವಾಗಿದೆ ಕಾಲವಿಲ್ಲಿ"

ದೇಸಿ ಸಂಸ್ಕೃತಿಯ ನಿರ್ಮಾಣ ಸೊಬಗನ್ನು ವಾಸ್ತವ ಅಲಂಕರಣವಾಗಿ ಪರಿಗ್ರಹಿಸಿ ನಿರ್ಮಿಸಿದ ದೇವಾಲಯ ಗೋಪುರದ ಮೇಲಂತಸ್ಥಿನ "ಕಟಾಂಜನ"ವು ಹಳೆಯದರ ಪರಿಷ್ಕೃತ ರೂಪ.ಇದು ಪಡುಬಿದ್ರಿಯ ನೂತನ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಾಲಯ ಸಮುಚ್ಚಯ ಪ್ರವೇಶದಲ್ಲಿ ಗೋಚರಿಸುವ ನೋಟ.

ವಾಸ್ತುಕಲೆಯ ವೈಭವ ಚೆಲ್ಲುವರಿದ ದೇವಾಲಯ ಸಮುಚ್ಚಯ ಪ್ರವೇಶವೇ ಒಂದು ರೋಮಾಂಚನ, ಕಣ್ಮನಗಳಿಗೆ ಮುದನೀಡುವ ದೃಶ್ಯಕಾವ್ಯದ ದರ್ಶನ.

ಗೋಪುರದ ಹೊರ ಬದಿ ಹಾಗೂ ಒಳಬದಿಯಲ್ಲಿ ಒಟ್ಟು 20 ಕಂಬಗಳಿವೆ.ಒಳಬದಿಯ ಚಾವಡಿಯಲ್ಲಿ ದಾರು ನಿರ್ಮಿತ ಅಂಕಣಮುಚ್ಚಿಕೆ, ಮೇಲಂತಸ್ಥಿನ ಕಟಾಂಜನ (ಕಡೆಕಟ್ಟು) ಗಮನಸೆಳೆಯುತ್ತವೆ.

"ಪ್ರಧಾನ ಬಲಿಪೀಠ": ಪುರಾತನ ಬಲಿಪೀಠದ ವಿನ್ಯಾಸದಂತೆಯೇ ಇದೆ, ಪುರಾತನ ನಕ್ಷೆಯನ್ನು ಉಳಿಸಿದಂತಾಗಿದೆ.ದೇವಳ ಪ್ರವೇಶದಲ್ಲಿ ಮಂಟಪದ ಕಂಬಗಳು ವಿಶೇಷವಾಗಿ ಅಲಂಕರಿಸಲ್ಪಟ್ಟಿವೆ.

ಮೂರು ಹಂತಗಳಲ್ಲಿ ರಚಿತವಾಗಿದ್ದು ಕೌಶಲ್ಯಪೂರ್ಣವಾದ ಎಂಟು ಗುಂಪುಗಳಾಗಿ ಪಡಿಮೂಡಿವೆ.ಕಂಬಗಳು ತಿರುಗುತ್ತಿರುವುದು ವೈಶಿಷ್ಟ್ಯವಾಗಿದೆ.ಕರ್ಣಮುಚ್ಚಿಕೆ ದಾರು ಶಿಲ್ಪದ ಸೋಜಿಗ . ಪ್ರವೇಶ ದ್ವಾರದ ಎರಡು ಬದಿಗಳಲ್ಲಿ ವ್ಯಾಳಕಂಬಗಳು,ದ್ವಾರಪಾಲಕರು,

ದೇವಳದ ಸುತ್ತುಪೌಳಿಯ ಭಿತ್ತಿಯ ಇಕ್ಕೆಲಗಳಲ್ಲಿ ಕುಂಭಲತೆಯ ವಿನ್ಯಾಸಗಳು ಹಾಗೂ ಶಾಲಾಕೂಟಗಳನ್ನು ಕೆತ್ತಲಾಗಿದೆ.ದ್ವಿತಲದ ಮುಖಮಂಟಪಕ್ಕೆ ಎದುರು ಹಾಗೂ ಇಕ್ಕೆಲಗಳಲ್ಲಿ ಜೋಡಿಸಿದ ಮುಖಾಯಾಮಗಳು ದಾರವಗಳ ವಿಶೇಷ ಸೊಬಗು. ಗ್ರೀವಭಾಗವು ಚಾರೆಗುಂಟಗಳಿಂದ ಅಲಂಕರಿಸಲಾಗಿದೆ.

ಅಗ್ರಸಭೆ : ನಾಲ್ಕು ಹೊಯ್ಸಳ ಶೈಲಿಯ ಕಂಬಗಳು,ಮರದ ನಕ್ಷತ್ರಮುಚ್ಚಿಕೆಗಳು ಮನೋಹರವಾಗಿವೆ.ಅಗ್ರಸಭೆಯ ಅಧಿಷ್ಠಾನವು ಕಲಶಬಂಧ ಅಧಿಷ್ಠಾನ. ಸುತ್ತುಪೌಳಿಯ ಸುತ್ತಲೂ 24 ಹೊಯ್ಸಳ ಶೈಲಿಯ ಕಂಬಗಳಿವೆ.

ಮಹಾಲಿಂಗೇಶ್ವರ ದೇವರ ಗರ್ಭಗುಡಿ : ದ್ವಿತಲದ ರಚನೆ,ಷಡ್ವರ್ಗ ಕ್ರಮದಲ್ಲಿದೆ.24 ಅಂಶದ ಪ್ರತಿಬಂಧ ಅಧಿಷ್ಠಾನ. ಭಿತ್ತಿಯ ದಿಕ್ಕಿನಲ್ಲಿ ಶಾಲಾಗಳು, ವಿದಿಕ್ಕಿನಲ್ಲಿ ಕೂಟಗಳ ಸಂಯೋಜನೆ ಸುಂದರವಾಗಿವೆ. ಭಿತ್ತಿಯ ಘನದ್ವಾರವನ್ನೇ ವಿಭಿನ್ನ ಶಾಲೆಯಾಗಿ ಕಂಡರಿಸಲಾಗಿದೆ.ಪಶ್ಚಿಮ ಘನದ್ವಾರವನ್ನು ನಿಜದ್ವಾರವಾಗಿ ಇಡಲಾಗಿದೆ. ಗ್ರೀವದ ನಿರ್ಮಾಣವು ಭಿತ್ತಿಯ ರಚನೆಗೆ ಪೂರಕವಾಗಿದೆ.

ತೀರ್ಥಮಂಟಪದ ಅಧಿಷ್ಠಾನವು ಪಾದಬಂಧ ಅಧಿಷ್ಠಾನ.ನಾಲ್ಕು ಕಂಬಗಳಿವೆ ಪ್ರತಿ ಕಂಬಗಳಲ್ಲಿ ನಾಲ್ಕು ನಾಲ್ಕು ಕಂಬಗಳು ಇರುವಂತೆ ಅತಿಶಯಗೊಳಿಸಲಾಗಿದೆ.ಹೊಯ್ಸಳ ಶೈಲಿಯ ಆಕರ್ಷಕ ಕರ್ಣಮುಚ್ಚಿಕೆ ಅರಳಿದ ಮನೋಹರ ಸೃಷ್ಟಿ.

ಗಣಪತಿ ದೇವರ ಗರ್ಭಗುಡಿ : ಗೋಪುರ ಕ್ರಮದ ವಿಮಾನವನ್ನು ಹೊಂದಿದೆ,ಪ್ರಾಸಾದ ಮಂಟಪ ಸಹಿತವಾಗಿದೆ.ಎದುರಿನಲ್ಲಿ ಚಾಲುಕ್ಯ ಮಾದರಿಯ ಎಂಟು ಕಂಬಗಳನ್ನು ಅಳವಡಿಸಿರುವ "ನಡೆಶಾಲೆ" ಇದೆ.ಇದೊಂದು ಅಪರೂಪದ ರಚನೆ.

ಮುಂದೆ ಮುಖಮಂಟಪ,ಹೊಯ್ಸಳ ಕ್ರಮದ ಎರಡು ಕಂಬಗಳು ಇವೆ.

ವಸಂತ ಮಂಟಪವು ಗೋಪುರ ಮಾದರಿಯಲ್ಲಿ ನಿರ್ಮಾಣವಾಗಿದೆ.

ಸಮಗ್ರ ಉಪಕ್ರಮದಲ್ಲಿ ಒಟ್ಟು 64 ಕಂಬಗಳು,

ಎರಡು ಶೈಲಿಗಳು ಹಾಗೂ ದೇಸಿ ಕ್ರಮಗಳ ಸಂಕಲನವಿದೆ. ಶಿಲ್ಪಕಲೆ,ಶಿಲ್ಪಶಾಸ್ತ್ರ,ಆಧುನಿಕ ತಂತ್ರಜ್ಞಾನದ ಸರ್ವ ಸಾಧ್ಯತೆಗಳನ್ನು ಬಳಸಿ ಸಾದ್ಯಂತ ಪುನರುದ್ಧಾರ ಸಂಪನ್ನಗೊಂಡಿದೆ.

ದೇವಳದೆಲ್ಲೆಡೆ ಶಿಲಾಶಿಲ್ಪ - ದಾರು ಶಿಲ್ಪಗಳು ಕುಡಿಯೊಡೆದಿವೆ. ಇಲ್ಲಿ ಪ್ರಾಪಂಚಿಕ ವಸ್ತುವಿನ ವಿಕಾಸವನ್ನು ಮನೋವಿಕಾಸಕ್ಕೆ ಬಳಸಿಕೊಂಡು "ಬ್ರಹ್ಮಸಾಕ್ಷಾತ್ಕಾರ"ಸಾಧಿಸುವ ತಲ್ಲೀನತೆ ಸಾಧಿತವಾಗುತ್ತದೆ'.ಪೂರಕವಾಗಿ ಶಿಲ್ಪಗಳ "ಬಿನ್ನಾಣ" ಪಡುಬಿದ್ರಿಯ ಉಳ್ಳಾಯನ ಸನ್ನಿಧಿಯಲ್ಲಿ ನಿರ್ಮಾಣವಾಗಿದೆ.

ಕವಿವಾಣಿ ನೆನಪಾಗುತ್ತದೆ....

"ಕುಶಲತೆಗೆ ಬೆರಗಾಗಿ ಮೂಕವಾಗಿದೆ ಕಾಲವಿಲ್ಲಿ".